# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

## ಸಿ.ಸಿ ನಂ:330/2021

ಫ್ರಾ.ಸಾ.-1
ಚಾ.ಸಾ.-1

| | | |
|---|---|---|
| ಹೆಸರು | : | ಪ್ರಕಾಶ ಸಹದೇವ ಪಠಾಣ |
| ವಯಸ್ಸು | : | **61** ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಹಲಗಾ ಗ್ರಾಮ. |

ದಿನಾಂಕ 21-06-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

2020 ನೇ ಸಾಲಿನಲ್ಲಿ ಒಂದು ದಿನ ನನ್ನ ಮಗ ಮನೆಯಲ್ಲಿರುವಾಗ ಆತನ ಸ್ನೇಹಿತ ತನ್ನ ಮೋಟಾರ್ ಸೈಕಲ್ ಮೇಲೆ ನನ್ನ ಮಗನನ್ನು ಕೆಲಸಕ್ಕೆಂದು ಕರೆದುಕೊಂಡು ಹೋಗಿದ್ದು ತದ ನಂತರ ಸಂಜೆಯ ಸಮಯದಲ್ಲಿ ನನಗೆ ಪರಿಚಯಸ್ಥರು ಫೋನ್ ಮಾಡಿ ಗಾರ್ಲಿ ಕ್ರಾಸ್ ಹತ್ತಿರ ನನ್ನ ಮಗ ಹಾಗೂ ಆತನ ಸ್ನೆಹಿತ ಹೋಗುತ್ತಿದ್ದ ಮೋಟಾರ್ ಸೈಕಲ್ ಗೆ ಅಪಘಾತವಾಗಿರುತ್ತದೆಯೆಂದು ತಿಳಿಸಿರುತ್ತಾರೆ. ನಂತರ ನಾವು 5-6 ಜನ ಸೇರಿ ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆ. ಅಪಘಾತ ಸ್ಥಳಕ್ಕೆ ಹೋಗಿನೋಡಿದಾಗ ಮೋಟಾರ್ ಸೈಕಲ್ ಚಲಾಯಿಸುತ್ತಿದ್ದ ಸವಾರನಿಗೆ ತಲೆಗೆ ಗಂಭೀರವಾದ ಗಾಯವಾಗಿ ಸ್ಥಳದಲ್ಲಿಯೇ ಮೃತ ಪಟ್ಟಿದ್ದನು. ನನ್ನ ಮಗನಿಗೆ ಗಂಭೀರ ಸ್ವರೂಪದ ಗಾಯವಾಗಿದ್ದರಿಂದ ಆತನನ್ನು ಅಂಬೂಲನ್ಸನಲ್ಲಿ ರಾಮನಗರದ ಆಸ್ಪತ್ರೆಗೆ ಕಳುಹಿಸಿರುವುದಾಗಿ ತಿಳಿಸಿದ್ದು ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಮಗನಿಗೆ ತಲೆಗೆ ಹಾಗೂ ಬಲಗಾಲಿಗೆ ಮಾರಣಾಂತಿಕ ಪೆಟ್ಟಾಗಿದ್ದರಿಂದ ಆಸ್ಪತ್ರೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಮರಣ ಹೊಂದಿರುವುದು ಕಂಡು ಬಂದಿರುತ್ತದೆ. ಸದರಿ ಅಪಘಾತವು ಟೆಂಪೋ ಚಾಲಕನು ಅತಿ ವೇಗವಾಗಿ ಮತ್ತು ಅಜಾಗರೂಕತೆಯಿಂದ ಬಂದು ನನ್ನ ಮಗ ಹಾಗೂ ಆತನ ಸ್ನೇಹಿತ ಹೋಗುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುವುದು ಕಂಡು ಬಂದಿದ್ದು ಆ ರೀತಿ ಚಾಲಕನ ವಿರುದ್ದ ಕ್ರಮ ತೆಗೆದುಕೊಳ್ಳುವಂತೆ ದೂರನ್ನು ನೀಡಿರುತ್ತೇನೆ. ದೂರು ನೀಡಿದ ನಂತರ ಪೋಲೀಸರು

ಅಪಘಾತವಾದ ಸ್ಥಳಕ್ಕೆ ಬಂದಿದ್ದು ನಾನು ಅಪಘಾತವಾದ ಸ್ಥಳವನ್ನು ತೋರಿಸಿದ ಮೇರೆಗೆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದು ಫೋಟೋ ತೆಗೆದಿರುತ್ತಾರೆ. ಸಾಕ್ಷಿದಾರರಿಗೆ ಈಗ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ದೂರನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1-ಎ ಮತ್ತು ನಿ.ಪಿ.1-ಬಿ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮಹಜರನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿ.ಪಿ.2 ಎಂದು,ಸಾಕ್ಷಿದಾರರ ಸಹಿಯನ್ನು ನಿ.ಪಿ.2-ಎ ಎಂದು ಗುರುತಿಸಲಾಯಿತು. ಮಹಜರ ಸಮಯದಲ್ಲಿ ತೆಗೆದ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3 ಎಂದು, ಸಿಡಿಯನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಈಗ ಅಪಘಾತಕ್ಕೀಡಾದ ಮೋಟಾರ್ ಸೈಕಲ್ ಮತ್ತು ಗೂಡ್ಸ್ ವಾಹನದ ಛಾಯಾ ಚಿತ್ರವನ್ನು ನೋಡಿ ಗುರುತಿಸಿದ್ದು ನಿ.ಪಿ.5 ರಿಂದ ನಿ.ಪಿ.10 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಸ್.ಎಸ್.ಎಂ ವಕೀಲರಿಂದ

ನಾನು ವ್ಯವಸಾಯ ಮಾಡುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲವೆಂದರೆ ಸರಿ. ನಿ.ಪಿ.1 ದೂರನ್ನು ಕನ್ನಡದಲ್ಲಿ ಬರೆದಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಸಹಿ ಮಾತ್ರ ಮಾಡಿರುತ್ತೇನೆ. ಅಪಘಾತ ಸ್ಥಳದಲ್ಲಿ ಅಳ್ನಾವರದ ಕಡೆಗೆ ಹೋಗುವ ರಸ್ತೆಯು ಏರು ಮುಖದಲ್ಲಿದ್ದು ರಾಮನಗರದ ಕಡೆಗೆ ಬರುವ ರಸ್ತೆ ಇಳಿಜಾರಿನಲ್ಲಿ ಬರುತ್ತದೆಯೆಂದರೆ ಸರಿ. ಆದುದರಿಂದ ಅಳ್ನಾವರದ ಕಡೆಗೆ ಬರುವ ಗಾಡಿಗಳು ಇಳಿಜಾರಿನಲ್ಲಿ ತುಂಬಾ ವೇಗವಾಗಿ ಬರುತ್ತದೆಯೆಂದರೆ ಸಾಕ್ಷಿದಾರರು ಅಳ್ನಾವರದ ಕಡೆಗೆ ಹೋಗಿಲ್ಲ, ನಾಗರಗಾಳಿ ಕಡೆಯಿಂದ ಗಾರ್ಲಿ ಕ್ರಾಸ್ ಬಳಿ ಮೃತರು ಬೈಕ್ ನಲ್ಲಿ ಹೋಗಿರುತ್ತಾರೆಂದು ಉತ್ತರಿಸಿರುತ್ತಾರೆ. ರಾಮನಗರದ ಕಡೆಗೆ ಹೋಗುವ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಈ ಹಂತದಲ್ಲಿ ಆರೋಪಿಯು ರಾಂಗ್ ಸೈಡ್ ಬಂದು ಅಪಘಾತ ಮಾಡಿರುತ್ತಾನೆಂದು ಹೇಳುತ್ತಾರೆ. ರಾಂಗ್ ಸೈಡನಲ್ಲಿ ಬಂದು ಅಪಘಾತ ಮಾಡಿರುತ್ತಾರೆಂದು ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲವೆಂದರೆ ಸರಿಯಲ್ಲ. ರಾಮನಗರದ ಕಡೆಯಿಂದ ಅಳ್ನಾವಾರದ ಕಡೆಗೆ ಬರುವ ವಾಹನಗಳು ನಿಧಾನವಾಗಿ ತಿರುಕವಿನಲ್ಲಿ ಹೋಗುತ್ತಾರೆಂದರೆ ಸರಿಯಲ್ಲ. ಅಪಘಾತಕ್ಕಿಡಾದ ಎರಡೂ ವಾಹನಗಳ ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ.

ಸಾಕ್ಷಿದಾರರಿಗೆ ಈಗ ನಿ.ಪಿ.7 ಪೋಟೋವನ್ನು ತೋರಿಸಿ ಸದರಿ ಪೋಟೋದಲ್ಲಿ ಸದರಿ ಅಪಘಾತಕ್ಕಿಡಾದ ಗೂಡ್ಸ ವಾಹನವು ರಾಮನಗರ ಅಳ್ನಾವರ ರಸ್ತೆಯ ಎಡಬಾಗದಲ್ಲಿ

ನಿಂತಿರುತ್ತದೆಯೆಂದರೆ ಸಾಕ್ಷಿದಾರರು ಅಪಘಾತ ಪಡಿಸಿ ಎಡಬಾಗಕ್ಕೆ ಹೋಗಿರುತ್ತದೆಯೆಂದು ಉತ್ತರಿಸುತ್ತಾರೆ. ಆರೋಪಿಯು ತಮ್ಮ ವಾಹನವನ್ನು ತನ್ನ ಪಥದಲ್ಲಿಯೇ ಚಲಾಯಿಸಿಕೊಂಡು ಹೋಗುತ್ತಿದ್ದು ಮೃತ ವಿಜಯ ಮಿರಾಶೆ ದ್ವಿಚಕ್ರವಾಹನವನ್ನು ಅತಿ ವೇಗವಾಗಿ ಓಡಿಸಿಕೊಂಡು ಹೋಗಿ ಆರೋಪಿಯ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತ ಉಂಟು ಮಾಡಿರುತ್ತಾರೆಂದರೆ ಸರಿಯಲ್ಲ. ಅಪಘಾತಕ್ಕೆ ಆರೋಪಿ ಕಾರಣನಲ್ಲ, ಆತನದು ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಬೈಕ್ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆಯೆಂದರೆ ಸರಿಯಲ್ಲ.

ನಾವು ರಾಮನಗರದ ರಸ್ತೆಯಿಂದ ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆ. ನಾವು ರಾಮನಗರದ ರಸ್ತೆಯಿಂದ ಹೋಗಿದ್ದರಿಂದ ರಸ್ತೆಯ ಎಡಬದಿಯಲ್ಲಿ ವಾಹನಗಳು ನಿಂತಿದ್ದವು ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ಚಾಲಕನಿಗೆ ಚಾಲನಾ ಪರವಾನಿಗೆ ಹಾಗೂ ವಿಮೆ ಇರದ ಕಾರಣ ಗೂಡ್ಸ ವಾಹನದ ಮೇಲೆ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪಿಲ್ಲದಿದ್ದರೂ ಪರಿಹಾರ ಪಡೆಯುವ ಉದ್ದೇಶದಿಂದ ಪೋಲೀಸರ ಜೊತೆಗೆ ಶಾಮೀಲಾಗಿ ಸುಳ್ಳು ದೂರನ್ನು ನೀಡಿರುತ್ತೇವೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.